**CW : 23**

PW : 8

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1577/2025

ಸಾಕ್ಷಿದಾರರ ಹೆಸರು : ಶ್ರೀ ರವಿ ಬಿ ಎಸ್

ತಂದೆಯ ಹೆಸರು : ಸಣ್ಣೇಗೌಡ

ಪ್ರಾಯ : 45 ವರ್ಷ

ಉದ್ಯೋಗ ಪೊ. ವೃತ್ತ ನಿರೀಕ್ಷಕರು, ಬೆಳ್ತಂಗಡಿ ಗ್ರಾಮಾಂತರ ವೃತ್ತ

ವಾಸಸ್ಥಳ : ಬೆಳ್ತಂಗಡಿ

ದಿನಾಂಕಃ **12.05.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಜೂನ್ 2023 ರಿಂದ ಮಾರ್ಚ್ 2024ರವರೆಗೆ ಪುತ್ತೂರು ಗ್ರಾಮಾಂತರ ಪೋಠಾಣೆಯಲ್ಲಿ ಪ್ರಭಾರ ಪೊ. ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ.27-06-2025 ರಂದು ಚಾಸಾ27 ರವರಿಂದ ಈ ಪ್ರಕರಣದ ಕಡತವನ್ನು ಸ್ವೀಕರಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ. ದಿ.10.07.2025 ರಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪುತ್ತೂರು ಗ್ರಾಮಾಂತರ ಪೊ.ಠಾಣಾ ಯುಡಿಆರ್ ನಂ. 21-2025 ರ ಮೂಲ ಕಡತವನ್ನು ಎಸ್ ಡಿ ಎಂ ನ್ಯಾಯಾಲಯದಿಂದ ಮಾನ್ಯ ನ್ಯಾಯಾಲಯಕ್ಕೆ ವರ್ಗಾಯಿಸುವಂತೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ಅದೇ ದಿನ ಆರೋಪಿತನ ಮೇಲೆ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಪಿ ಎಂ ವರದಿಯಲ್ಲಿ ಅಥವಾ ಆರ್ ಎಫ್ ಎಸ್ ಎಲ್ ವರದಿಯಲ್ಲಿ ಇಬ್ರಾಹಿಂ ರವರು ಅಪಘಾತದಿಂದ ಆದ ಗಾಯಗಳಿಂದ ಮೃತಪಟ್ಟಿರುವ ಬಗ್ಗೆ ನಮೂದು ಇಲ್ಲ. ಸಾಕ್ಷಿಯು ಮುಂದುವರೆದು ಸದರಿ ಪಿ ಎಂ ವರದಿಯಲ್ಲಿ ಅಂತಿಮ ಅಭಿಪ್ರಾಯವನ್ನು ಆರ್ ಎಫ್ ಎಸ್ ಎಲ್ ವರದಿ ಬಂದ ನಂತರ ನೀಡುವುದಾಗಿ ನಮೂದಿಸಿದ್ದು ನಂತರ ಆರ್ ಎಫ್ ಎಸ್ ಎಲ್ ವರದಿ ಬಂದ ನಂತರ ಅಂತಿಮ ವರದಿಯನ್ನು ಹಿಂದಿನ ತನಿಖಾಧಿಕಾರಿಯವರು ಪಡೆದಿದ್ದಾರೆ. ಪಿ ಎಂ ವರದಿಯ ಎರಡನೇ ಪುಟದಲ್ಲಿ ಸಿ3,ಸಿ4 ಸರಿಯಾಗಿ ಇವೆ ಎಂದು

ನಮೂದಿದೆ ಎಂದರೆ ಸರಿ. ಪಿ ಎಂ ವರದಿಗೆ ವಿರುದ್ಧವಾಗಿ ನಮ್ಮ ಕೆಳಹಂತದ ಅಧಿಕಾರಿಗಳು ಸುಳ್ಳು ವರದಿಯನ್ನು ಪಡೆದಿದ್ದಾರೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಸಮರ್ಪಕ ತನಿಖೆ ಮಾಡಿಲ್ಲ ಮತು ಇಬ್ರಾಹಿಂರವರು ಅಪಘಾತಗಳಿಂದ ಆದ ಗಾಯಗಳಿಂದ ಮೃತಪಟ್ಟಿಲ್ಲ ಎಂದರೆ ಸುಳ್ಳು. ನನ್ನ ಕೆಳಹಂತದ ಅಧಿಕಾರಿಗಳು ತಯಾರಿಸಿದ ದೋಷಾರೋಪಣಾ ಪತ್ರಕ್ಕೆ ಕೇವಲ ಅನುಮೋದನೆ ನೀಡಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.